ಮುಖದ ಹೊರಚಹರೆಯನ್ನಷ್ಟೇ ಅವರು ಗ್ರಹಿಸುತ್ತಾರೆ.

ಉದಾಹರಣೆಗೆ ನಿಮಗೆ ಹತ್ತಿರವಾದ ಐದು ಜನ ಸ್ನೇಹಿತರ ಮುಖಗಳನ್ನು ನೀವು ವಿವರಿಸಬಲ್ಲಿರಾ? ಹಲವರಿಗೆ ಅದು ಸಾಧ್ಯವಿಲ್ಲವೆಂದು ನನಗೆ ಗೊತ್ತು. ನಾನು ಅನೇಕ ಬಾರಿ ಹಲವು ಗಂಡಸರನ್ನು ಪ್ರಶ್ನಿಸಿದ್ದೆ, 'ನಿಮ್ಮ ಹೆಂಡತಿಯ ಕಣ್ಣಿನ ಬಣ್ಣ ಯಾವುದು?' ಎಂದು. ಅನೇಕರು ಉತ್ತರ ಗೊತ್ತಿಲ್ಲದೇ ಪರದಾಡಿದ್ದಾರೆ. ನಮ್ಮಲ್ಲಿ ಹೆಂಗಸರು ಗಂಡನ ಮೇಲೆ ಮಾಡುವ ಸಾಮಾನ್ಯ ಆರೋಪವೆಂದರೆ ಅವರು ತಮ್ಮ ಡ್ರೆಸ್, ಕ್ಯಾಪ್ ಮತ್ತು ಬದಲಾದ ಮನೆಯ ಅಲಂಕಾರಗಳನ್ನು ಗಮನಿಸುವುದೇ ಇಲ್ಲ ಎಂಬುದಾಗಿದೆ. ದಿನವೂ ನೋಡುವ ವಸ್ತುಗಳ ಬಗ್ಗೆ ಒಂದು ಜಡತೆಯ ಭಾವ ಕ್ರಮೇಣ ನಮ್ಮನ್ನು ಆವರಿಸಿಕೊಳ್ಳುತ್ತದೆ ಮತ್ತು ಅದಕ್ಕಿಂತ ಭಿನ್ನವಾದುದನ್ನು ಕಂಡಾಗ ಮಾತ್ರವೇ ದಾಖಲಿಸುತ್ತದೆ. ಇದಕ್ಕೇ ಇರಬೇಕು, ಕೋರ್ಟಿನಲ್ಲಿ ಸಾಕ್ಷಿಯು ನೋಡಿದ್ದರ ಆಧಾರದ ಮೇಲೆ ತೀರ್ಪುಗಳನ್ನು ನೀಡುತ್ತಾರೆ. ಒಂದೇ ಪ್ರಕರಣದಲ್ಲಿ ನೋಡುಗರು ಬೇರೆಯಾದಂತೆಲ್ಲ ನೋಟಗಳೂ ಬೇರೆಯಾಗುತ್ತ ಸಾಗುತ್ತವೆ. ಅಂತಿಮವಾಗಿ ಸಿಗುವ ಘಟನೆಯ ಚಿತ್ರಣದ ಆಧಾರದಿಂದ ತೀರ್ಪುಗಳನ್ನು ನೀಡಲಾಗುತ್ತದೆ. ನೋಡುವುದರ ಬಗ್ಗೆ ಹೇಳುತ್ತಾ ನಾನು ನನ್ನ ಮೂರುದಿನಗಳ ಬಗ್ಗೆ ಹೇಳುವುದನ್ನೇ ಮರೆಯುತ್ತಿದ್ದೇನೆ ನೋಡಿ.

ಮೊದಲ ದಿನ ನಾನು ನನ್ನೆಲ್ಲ ಗೆಳತಿಯರನ್ನು ಕಣ್ತುಂಬಿಕೊಳ್ಳುತ್ತೇನೆ. ಅವರ ಮುಖದ ಗುರುತುಗಳನ್ನು ನನ್ನ ಮನಸ್ಸಿನಲ್ಲಿ ಅಚ್ಚುಮಾಡಿಕೊಳ್ಳುತ್ತೇನೆ. ಹಾಗೆಯೇ ಮುದ್ದು ಮಗುವೊಂದರ ಮುಖವನ್ನು ನೋಡಲು ಮರೆಯುವುದಿಲ್ಲ. ಮುಗ್ಧ, ಕುತೂಹಲಿ ಮತ್ತು ಸುಂದರ ಮೊಗವೊಂದು ಸ್ವಯಂ ಅಸ್ತಿತ್ವವುಳ್ಳ ಮನುಷ್ಯನಾಗಿ ಬೆಳೆಯುವ ಹಂತವನ್ನು ಅರಿಯಲು ಇದು ಬಹಳ ಮುಖ್ಯವಾಗಿದೆ. ನನ್ನ ನಂಬಿಗಸ್ತ ನಾಯಿಗಳನ್ನು ನಾನು ನೋಡಬೇಕು. ಸದಾ ನನ್ನ ಸಂಗಾತಿಗಳಾಗಿ ನನಗೆ ಬದುಕಿನ ಬಗ್ಗೆ ಭರವಸೆಯನ್ನು ಮೂಡಿಸಿದ ಜೀವಗಳವು. ಮತ್ತೆ ನಾನು ನನ್ನ ಮನೆಯ ಇಂಚಿಂಚನ್ನೂ ನೋಡುತ್ತೇನೆ. ನನ್ನ ಕಾಲಿನ ಅಡಿಯಲ್ಲಿರುವ ಕಾರ್ಪೆಟ್‌ನ ಮೇಲಿನ ಹೂಗಳು, ಗೋಡೆಯ ಮೇಲಿರುವ ಅಲಂಕಾರಿಕ ಚಿತ್ರಿಕೆಗಳು, ಮುಖ್ಯವಾಗಿ ನನ್ನ ಜೀವನವನ್ನು ಬೆಳಗಿದ ಬೆಳಕಿನಂತಹ ಪುಸ್ತಕಗಳು, ಜತೆಯಲ್ಲಿ ಈ ಕಟ್ಟಡವನ್ನು ಮನೆಯನ್ನಾಗಿಸಿದ ಎಲ್ಲವನ್ನೂ ನೋಡಬಯಸುತ್ತೇನೆ.

ಮೊದಲ ದಿನದ ಸಂಜೆ ನಾನು ಕಾಡಿನ ದಾರಿಯಲ್ಲಿ ಬಹುದೂರದವರೆಗೆ ವಾಯುಸಂಚಾರ ಹೊರಡುತ್ತೇನೆ. ದಾರಿಯಿಡೀ ಪ್ರಕೃತಿಯ ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತೇನೆ. ನನ್ನ ಸ್ಪರ್ಶಕ್ಕೆ ಮಾತ್ರವೇ ಸಿಗುತ್ತಿದ್ದ ನಿಸರ್ಗದ ಬಣ್ಣಗಳನ್ನು ಚಿತ್ತಭಿತ್ತಿಯಲ್ಲಿ ದಾಖಲಿಸಿಕೊಳ್ಳುತ್ತೇನೆ. ಹಾಗೆ ಮರಳಿ ಬರುವಾಗ ಹೊಲಗದ್ದೆಗಳ ದಾರಿಯಲ್ಲಿ ನಡೆಯುತ್ತೇನೆ. ಕುದುರೆಗಳು ಹೊಲವನ್ನು ಉಳುವ ದೃಶ್ಯವನ್ನು ನೋಡುವ ಹಂಬಲ ನನ್ನದು. ಬರಿಯ ಟ್ರ್ಯಾಕ್ಟರುಗಳೇ ಕಣ್ಣಿಗೆ ಬಿದ್ದರೂ ಅಚ್ಚರಿಯಿಲ್ಲ. ಮಣ್ಣಿನೊಂದಿಗೆ ಮಾತನಾಡುವ ಕೃಷಿಕರನ್ನು ಹತ್ತಿರದಿಂದ ನೋಡುವ ಆಸೆ ನನ್ನದು. ಅದೃಷ್ಟವಿದ್ದರೆ ಸೂರ್ಯಾಸ್ತದ ದೃಶ್ಯವೂ ನನಗೆ ದಕ್ಕಬಹುದು. ಸೂರ್ಯ ಮುಳುಗಿದ ನಂತರವೂ ಜಗತ್ತನ್ನು ಬೆಳಗುವ ಮಾನವನಿರ್ಮಿತ ದೀಪಗಳ ಬೆಳಕನ್ನು ನೋಡಬೇಕು ನಾನು. ಹಾಗಾಗಿ ಕತ್ತಲಾದ ಮೇಲೆಯೇ ಮನೆಗೆ ಮರಳುತ್ತೇನೆ. ಬಹುಶಃ ಈ ದಿನ ನನಗೆ ನಿದ್ದೆ ಬರಲಿಕ್ಕಿಲ್ಲ. ದಿನವಿಡೀ ನೋಡಿದ ದೃಶ್ಯಗಳು ಕಣ್ಮುಂದೆ ಚಿತ್ರಗಳಾಗಿ ಹರಡಿಕೊಳ್ಳಬಹುದು. ಎರಡನೆಯ ದಿನ ಮುಂಜಾವು ನಾನು ಬೇಗ ಏಳುತ್ತೇನೆ. ಕತ್ತಲು ಬೆಳಕಾಗಿ ಬದಲಾಗುವ ವಿಸ್ಮಯವನ್ನು ಕಣ್ತುಂಬಿಕೊಳ್ಳುತ್ತೇನೆ. ಸೂರ್ಯ ರಶ್ಮಿಗಳು ಮಲಗಿರುವ ಭೂಮಿಯನ್ನು ಎಬ್ಬಿಸುವ ಸುಂದರ ಗಳಿಗೆಗಳಿಗೆ ಸಾಕ್ಷಿಯಾಗುತ್ತೇನೆ. ಎರಡನೆಯ ದಿನ ನಾನು ಈ ಭೂಮಿಯ ವಿಕಾಸದ ಹಾದಿಯನ್ನು ನೋಡಬಯಸುತ್ತೇನೆ. ಅದಕ್ಕಾಗಿ ನಾನು ಐತಿಹಾಸಿಕ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಬೇಕು. ಈಗಾಗಲೇ ನಾನದನ್ನು ಸ್ಪರ್ಶದ ಮೂಲಕ ನೋಡಿರುವೆ. ಆದರೆ ಈಗ ಆ ಎಲ್ಲ ವಿಕಾಸದ ಹಾದಿಯ ವಿಸ್ಮಯಗಳನ್ನು ಕಣ್ಣುಗಳ ಮೂಲಕ ನೋಡುತ್ತೇನೆ. ಎಲ್ಲ ಪ್ರಾಣಿಗಳಂತೆ ಬದುಕುತ್ತಿದ್ದ ಮನುಷ್ಯನೆಂಬ ಜೀವಿಯೊಬ್ಬ ಇಡಿಯ ಜಗತ್ತನ್ನು ತನಗೆ ಬೇಕಾದಂತೆ ರೂಪಿಸಿಕೊಂಡ ಚರಿತ್ರೆಯನ್ನು ನೋಡಲು ಯಾರಿಗೆ ತಾನೆ ಇಷ್ಟವಿಲ್ಲ? ನಿಮ್ಮಲ್ಲಿ ಕೆಲವರಿಗಾದರೂ ವಸ್ತುಸಂಗ್ರಹಾಲಯವನ್ನು ನೋಡುವ ಅವಕಾಶ ಸಿಕ್ಕಿರಬಹುದೆಂದು ಭಾವಿಸುವೆ.